<u>ಅಸಲು ದಾವಾ ಸಂಖ್ಯೆ: **-123/2024**</u> ಪಿ.ಡಬ್ಲ್ಯೂ.**:-2**

ದಿನಾಂಕ: **07.03.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು 2 ನೇ ವಾದಿ ಹೇಳಿ ಬರೆಸಿದ್ದಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಸ್ವಂತ ಊರು ಬೀಜೋಗಟ್ಟೆ ವಾದಿಗಳು ಸಹ ಬೀಜೋಗಟ್ಟೆ ಗ್ರಾಮದ ವಾಸಿಗಳು. ವಾದಿಗಳು ಚನ್ನೇಶಪ್ಪನ ಮೇಲೆ ತಮ್ಮ ಜಮೀನಿಗೆ ತೊಂದರೆಯನ್ನು ಕೊಡುತ್ತಿದ್ದಾರೆ ಎಂದು ದಾವೆಯನ್ನು ಸಲ್ಲಿಸಿದ್ದಾರೆ. ವಾದಿಗಳು ಸರ್ವೇ ನಂ.18 ರ ಜಮೀನಿಗೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿದ್ದಾರೆ. ಸರ್ವೇ ನಂ.18 ರಲ್ಲಿ ಒಟ್ಟು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಆದರೆ ಸರ್ವೇ ನಂ.18/ಪಿ3 ರಲ್ಲಿ 24 ಗುಂಟೆ ಜಮೀನು ಇರುತ್ತದೆ. ಸರ್ವೇ ನಂ.18ರ ಜಮೀನು ಒಟ್ಟು ಎಷ್ಟು ಪೋಡಿಯಾಗಿದೆ ಎಂದು ನನಗೆ ಗೊತ್ತಿಲ್ಲ. ನನಗೆ ಸೇರಿದ ಸರ್ವೇ ನಂ.18/ಪಿ3ರ ಪಹಣಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿನನಗೆ ಸೇರಿದ ಸರ್ವೇ ನಂ.18/ಪಿ3 ರಲ್ಲಿ 30 ಗುಂಟೆ ಜಮೀನು ಇದೆ ಎಂದು ನಮೂದು ಮಾಡಿಸಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಇತ್ತೀಚಿನ ಪಹಣಿಯಲ್ಲಿ 6 ಗುಂಟೆ ಬಿಟ್ಟುಹೋಗಿದೆ ಎಂದು ನುಡಿಯುತ್ತಾರೆ. ಸದರಿ ಮೇಲ್ಕಂಡ ವಿಚಾರವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಸಿಲ್ಲ ಎಂದರೆ ಸರಿ. 1 ನೇ ವಾದಿ ಜಮೀನನ್ನು ಯಾರಿಂದ ಮತ್ತು ಯಾವಾಗ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ನೇ ವಾದಿಗೆ ಸೇರಿದ ಜಮೀನಿನ ಹಳೇ ಸರ್ವೇ ನಂಬರ್ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 1 ನೇ ವಾದಿಗೆ ಈ ಹಿಂದೆ ಸರ್ವೇ ನಂ.18/6 ರ ಜಮೀನು ಇದ್ದು ಈಗ ಸರ್ವೇ ನಂ.18 ಆಗಿದೆ ಎಂದು ನಮೂದಾಗಿರುವ ವಿಚಾರ ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 1 ನೇ ವಾದಿಗೆ 1 ಎಕರೆ 32 ಗುಂಟೆ ಜಮೀನು ಇದ್ದು ಅದರಲ್ಲಿ 16

ಗುಂಟೆ ಕರಾಬು ಜಮೀನು ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿಗೆ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸರ್ವೇ ನಂ.18 ರಲ್ಲಿ ನಿಮಗೆ 30 ಗುಂಟೆ ಜಮೀನು ಮತ್ತು ಸರ್ವೇ ನಂ.18 ರಲ್ಲಿ 1 ಎಕರೆ 32 ಗುಂಟೆ ಜಮೀನು 1 ನೇ ವಾದಿಗೆ ಸೇರಿದೆ ಎಂದು ನಮೂದು ಮಾಡಿದ್ದು ಅದರಲ್ಲಿ ಯಾವುದು ಸರಿ ಎಂದರೆ ಸಾಕ್ಷಿಯು ನನಗೆ ಸೇರಿದ 30 ಗುಂಟೆ ಜಮೀನು ಮತ್ತು ವಾದಿಗೆ ಸೇರಿದ 1 ಎಕರೆ 32 ಗುಂಟೆ ಜಮೀನು ಸರ್ವೇ ನಂ.18 ರಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ವಾದಿಯು ಸರ್ವೇ ನಂ.18 ರಲ್ಲಿರುವ ಒಟ್ಟು ವಿಸ್ತೀರ್ಣ 1 ಎಕರೆ 32 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಮೇಲ್ಕಂಡ 1 ಎಕರೆ 32 ಗುಂಟೆ ಜಮೀನಿನಲ್ಲಿ ನಿಮಗೆ ಸೇರಿದ 30 ಗುಂಟೆ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.18 ರಲ್ಲಿ ಗೋವಿಂದಪ್ಪ, ಗೋವರ್ಧನರೆಡ್ಡಿ, 1 ನೇ ವಾದಿ, ಬಸಪ್ಪರೆಡ್ಡಿ, ಈಶ್ವರನಾಯ್ಕ, ರಾಮಚಂದ್ರನಾಯ್ಕ ಮತ್ತು ಇನ್ನು ಒಬ್ಬರು ಇಬ್ಬರು ಜನರು ಇದ್ದಾರೆ ಅವರು ಹೆಸರು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ-8 ಪಹಣಿಯಲ್ಲಿ ಸರ್ವೇ ನಂ.18 ರಲ್ಲಿ ಒಟ್ಟು 19 ಎಕರೆ 27 ಗುಂಟೆ ಜಮೀನು ಮತ್ತು ಅದರಲ್ಲಿ 1 ಎಕರೆ 20 ಗುಂಟೆ ಕರಾಬು ಎಂದು ನಮೂದಾಗಿದೆ ಎಂದರೆ ಸರಿ. ಸದರಿ ನಿಪಿ-8 ರ ಕಲಂ ನಂ.9 ರಲ್ಲಿ ಮಾಲೀಕರ ಹೆಸರು ನಮೂದಾಗಿದೆ ಎಂದರೆ ಸರಿ. ಸದರಿ ನಿಪಿ-8 ರಲ್ಲಿ ಕಲಂ ನಂ.9 ರಲ್ಲಿ ಹುಚ್ಚಪ್ಪರೆಡ್ಡಿ 1 ಎಕರೆ 10 ಗುಂಟೆ ಜಮೀನು ಎಂದರೆ ಸರಿ. ಮಲ್ಲಮ್ಮ ಕೋಂ ಬಸಪ್ಪ 23 ಗುಂಟೆ ಜಮೀನಿನ ಮಾಲೀಕರು ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಮೂದಾಗಿದೆ ಆದರೆ ಸ್ವಾಧೀನದಲ್ಲಿ ಮಲ್ಲಮ್ಮರವರು ಇಲ್ಲ ಎಂದು ನುಡಿಯುತ್ತಾರೆ. ನಿಪಿ-8 ರಲ್ಲಿ ಕಲಂ ನಂ.9 ರಲ್ಲಿ ತಿಮ್ಮಪ್ಪ ಬಿನ್ ಹುಚ್ಚಪ್ಪ ಹಕ್ಕಾರ 1 ಎಕರೆ 22 ಗುಂಟೆ ಜಮೀನಿನ ಮಾಲೀಕರು ಎಂದು ನಮೂದಾಗಿದೆ ಎಂದರೆ ಸರಿ. ವಾದಿ 1 ಎಕರೆ 16 ಗುಂಟೆ ಜಮೀನಿನ ಮಾಲೀಕರು ಎಂದು ನಮೂದಾಗಿದೆ ಎಂದರೆ ಸರಿ. ಬಸಪ್ಪ ಯಾನೆ ಬಸಪ್ಪರೆಡ್ಡಿ ಬಿನ್ ಫಕೀರಪ್ಪ 1 ಎಕರೆ ಜಮೀನಿನ ಮಾಲೀಕರು ಎಂದು ನಮೂದಾಗಿದೆ ಎಂದರೆ ಸರಿ. ನಾಗರಾಜ 1 ಎಕರೆ 15 ಗುಂಟೆ ಜಮೀನಿನ ಮಾಲೀಕರು ಎಂದು ನಮೂದಾಗಿದೆ ಎಂದರೆ ಸರಿ. ವಸಂತರೆಡ್ಡಿ, ಬಸಪ್ಪರೆಡ್ಡಿ ಮತ್ತು ಶಶಿಕಲಾ ರವರು ಜಂಟಿಯಾಗಿ 30 ಗುಂಟೆ ಜಮೀನಿನ ಮಾಲೀಕರು ಎಂದು ನಮೂದಾಗಿದೆ ಎಂದರೆ

ಸಾಕ್ಷಿಯು ವಸಂತರೆಡ್ಡಿಯವರು ಬರುವುದಿಲ್ಲ ಎಂದು ನುಡಿಯುತ್ತಾರೆ. ಹೇಮಂತರೆಡ್ಡಿ, ಶ್ರೀಧರ, ಸುಜಾತ ಲಕ್ಷ್ಮರಿನಾಯ್ಕುರವರು ಜಂಟಿಯಾಗಿ 28 ಗುಂಟೆ ಜಮೀನಿನ ಮಾಲೀಕರು ಎಂದು ನಮೂದಾಗಿದೆ ಎಂದರೆ ಸಾಕ್ಷಿಯು 30 ಗುಂಟೆಯ ಮಾಲೀಕರು ಎಂದು ನುಡಿಯುತ್ತಾರೆ. ಗೋವಿಂದಪ್ಪರವರು 25 ಗುಂಟೆ ಜಮೀನಿನ ಮಾಲೀಕರು ಎಂದು ನಮೂದಾಗಿದೆ ಎಂದರೆ ಸರಿ. ಹೇಮಪ್ಪರೆಡ್ಡಿ, ಧನಂಜಯರೆಡ್ಡಿ, ವೆಂಕಟೇಶರೆಡ್ಡಿ, ಮಹೇಶರೆಡ್ಡಿ, ತಿಮ್ಮಪ್ಪರೆಡ್ಡಿ, ಬಸ್ಸಪ್ಪರೆಡ್ಡಿ, ಹನುಮಂತರೆಡ್ಡಿ,ರಾಮಪ್ಪರೆಡ್ಡಿ, ಬಾಬಾನಾಯ್ಕು, ಪದ್ಮಬಾಯಿರವರು ಜಂಟಿಯಾಗಿ 8 ಎಕರೆ 14 ಗುಂಟೆ ಜಮೀನಿನ ಮಾಲೀಕರು ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-8 ಪಹಣಿಯ ಕಲಂ ನಂ.9 ರಲ್ಲಿ ನಮೂದು ಮಾಡಿರುವ ಜಮೀನಿನ ಮಾಲೀಕರಿಗೆ ಎಷ್ಟು ಗುಂಟೆ ಕರಾಬು ಇದೆ ಎಂದು ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-8 ರ ಕಲಂ ನಂ.12 ರಲ್ಲಿ ಸ್ವಾಧೀನದಾರರ ಹೆಸರು ನಮೂದಾಗಿದೆ ಎಂದರೆ ಸರಿ. ಅದೇ ರೀತಿ ಮಲ್ಲಮ್ಮ ಕೋಂ ಬಸಪ್ಪರವರ ಹೆಸರು ನಮೂದಾಗಿದೆ ಎಂದರೆ ಸರಿ. ನಿಪಿ-8 ರಲ್ಲಿ ಸರ್ವೇ ನಂ.18 ರಲ್ಲಿ ಒಟ್ಟು ವಿಸ್ತೀರ್ಣ 19 ಎಕರೆ 27 ಗುಂಟೆ ಅದರಲ್ಲಿ ಅ ಕರಾಬು ಏನು ಇರುವುದಿಲ್ಲ ಬ ಕರಾಬು 1 ಎಕರೆ 20 ಗುಂಟೆ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-8 ರಲ್ಲಿ 18 ಎಕರೆ 7 ಗುಂಟೆ ಜಮೀನು ಕೃಷಿಯೋಗ್ಯ ಜಮೀನು ಎಂದು ನಮೂದಾಗಿದೆ ಎಂದರೆ ಸರಿ. ಸರ್ಕಾರದವರು ಬ ಕರಾಬು ಜಮೀನನ್ನು ಯಾವ ಉದ್ದೇಶಕ್ಕಾಗಿ ಉಪಯೋಗಿಸಲು ಬಿಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಬ ಕರಾಬು ಜಮೀನಿನ ಮಾಲೀಕರು ಸರ್ಕಾರದವರು ಮತ್ತು ಸರ್ಕಾರಕ್ಕೆ ಸೇರಿದ ಜಮೀನು ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಸೇರಿದ 1 ಎಕರೆ 32 ಗುಂಟೆ ಜಮೀನಿಗೆ ಚಕ್ಕುಬಂಧಿ ಪೂರ್ವಕ್ಕೆ ಕುರುವ ಗ್ರಾಮದ ಗಡಿ, ಪಶ್ಚಿಮಕ್ಕೆ ಹುಚ್ಚಪ್ಪರೆಡ್ಡಿ ತೋಟ, ಉತ್ತರಕ್ಕೆ ಈಶ್ವರನಾಯ್ಕರವರ ಜಮೀನು, ದಕ್ಷಿಣಕ್ಕೆ ಬಸಪ್ಪರೆಡ್ಡಿಯವರ ಜಮೀನು. ನನಗೆ ಸೇರಿದ 30 ಗುಂಟೆ ಜಮೀನಿನ ಚಕ್ಕುಬಂಧಿ ಪೂರ್ವಕ್ಕೆ ಕುರುವ ಗ್ರಾಮದ ಗಡಿ, ಪಶ್ಚಿಮಕ್ಕೆ ಹುಚ್ಚಪ್ಪರೆಡ್ಡಿ ತೋಟ, ಉತ್ತರಕ್ಕೆ ಗೋವರ್ಧನರೆಡ್ಡಿರವರ ಜಮೀನು, ದಕ್ಷಿಣಕ್ಕೆ ರಾಮಚಂದ್ರನಾಯ್ಕುರವರ ಜಮೀನು. ನಿಪಿ-8 ಪ್ರಕಾರ ಸರ್ವೇ ನಂ.18 ರಲ್ಲಿ ಕೃಷಿಯೋಗ್ಯ ಜಮೀನು 18 ಎಕರೆ 7 ಗುಂಟೆ ಜಮೀನು ಇದ್ದು ಅದಕ್ಕೆ ಚಕ್ಕುಬಂಧಿ ಪೂರ್ವಕ್ಕೆ ಕುರುವ ಗ್ರಾಮದ ಗಡಿ, ಪಶ್ಚಿಮಕ್ಕೆ ಹುಚ್ಚಪ್ಪರೆಡ್ಡಿ ತೋಟ, ಉತ್ತರಕ್ಕೆ

ಹಳ್ಳ, ದಕ್ಷಿಣಕ್ಕೆ ಗೋವಿನಕೋವಿ ರಸ್ತೆ. 18 ಎಕರೆ 7 ಗುಂಟೆ ಜಮೀನಿನ ಉತ್ತರ ಮತ್ತು ದಕ್ಷಿಣಕ್ಕೆ ಇರುವ ಹಳ್ಳ ಮತ್ತು ಗೋವಿನಕೋವಿಗೆ ಹೋಗುವ ರಸ್ತೆ 1 ಎಕರೆ 20 ಗುಂಟೆ ಬ ಕರಾಬು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ನಾವು ಒಟ್ಟು 3 ಜನ ಮಕ್ಕಳು ಅಂದರೆ ನಾನು, ಸರಸ್ವತಿ, ಭಾಗ್ಯಲಕ್ಷ್ಮಿ, ನನ್ನ ತಂದೆ ಈಗ್ಗೆ 1 ½ ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ಇತ್ತೀಚೆಗೆ ನಮ್ಮ ತಾಯಿಯ ಹೆಸರಿಗೆ ಈಗ್ಗೆ 4-5 ದಿನಗಳ ಹಿಂದೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇವು. ನನ್ನ ತಾಯಿಯ ಹೆಸರು ಶಾರದಮ್ಮ ಮತ್ತು ಅವರ ಹೆಸರಿಗೆ ಖಾತೆ ಮತ್ತು ಪಹಣಿ ಆಗಿರುತ್ತದೆ. ನಮ್ಮ ತಾಯಿಯ ಹೆಸರಿಗೆ ಸರ್ವೇ ನಂ.18/3 ಪಿ ರಲ್ಲಿ 24 ಗುಂಟೆ ಜಮೀನು ನಮೂದಾಗಿರುತ್ತದೆ. ಸದರಿ ಪಹಣಿಯನ್ನು ನಾನು ನೋಡಿರುವುದಿಲ್ಲ ಆದರೆ ಗ್ರಾಮ ಲೆಕ್ಕಾಧಿಕಾರಿಗಳು ತಿಳಿಸಿದ್ದಾರೆ ಎಂದು ನುಡಿಯುತ್ತಾರೆ. ಸರ್ವೇ ನಂ.18 ಈಗ ಅಸ್ತಿತ್ವದಲ್ಲಿ ಇಲ್ಲ ಅದು ಸರ್ವೇ ನಂ.18/ಪಿ1 ರಿಂದ ಸುಮಾರು ಪಿ ನಂಬರ್ ಗಳಾಗಿ ಪರಿವರ್ತನೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿಲ್ಲ ಮತ್ತು ಸಾಗುವಳಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.18 ರಲ್ಲಿ 1 ಎಕರೆ 32 ಗುಂಟೆ ಜಮೀನು ಇಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.18 ರಲ್ಲಿ 30 ಗುಂಟೆ ಜಮೀನಿನಲ್ಲಿ ನಾವು ಸ್ವಾಧೀನಾನುಭವದಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಹೊನ್ನಾಳಿ.**